ಶ್ರೀ ಬಿ ಜೈರಪ್ಪಾಜಿ:– ನಂಪಿಗೆ ಮೂಚೇನಹಳ್ಳಿಗೆ ಒಂದು ಆಸ್ಪತ್ರೆ ಕೊಡುತ್ತೇನೆಂದು ತಾವು ಒಪ್ಪಿಕೊಂಡಿದ್ದೀರಿ. ಅದು ಬಹಳ ದೂರ ಇದೆ. ಆದ್ದರಿಂದ ಈ ವರ್ಷ ಅಲ್ಲಿಗೆ ಮೆಡಿಕಲ್ ಸೆಂಟರ್ ಕೊಡುವುದಕ್ಕೆ ತಾವು ಏನು ನಿಗಧಿ ಹಣವನ್ನು ನಿಗಧಿ ಮಾಡುತ್ತೀರೋ ಅದನ್ನು ನಾನು ಗ್ರಾಮಸ್ಥರಿಂದ ಕೊಡಿಸುವುದಕ್ಕೆ ತಯಾರಿದ್ದೇನೆ. ಆದ್ದರಿಂದ ಅಲ್ಲಿ ಒಂದು ಆಸ್ಪತ್ರೆಯನ್ನು ಕೊಡಿಸುವುದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ?

ಶ್ರೀ ಹೆಚ್. ಸಿದ್ದವೀರಪ್ಪ :– ಗ್ರಾಮಸ್ಥರು ಮುಂದೆ ಬರಲಿ. ಮಾಡೋಣ. ಅದನ್ನು ಆಗ ಪರಿಶೀಲನೆ ಮಾಡೋಣ. Villagers must come forward. I will ask the District Health Officer to get a report.

**Cinema Licences issued in Bangalore City*

721. SRI H. D. DEVE GOWDA (Holenarasipur):— Will the Chief Minister be pleased to state :-the number of cinema licences issued during the last one one year in Bangalore City to individuals and firms and the names of such individuals and partners of firms ?

SRI D. DEVARAJ URS (Chief Minister):—Seven only (Three individuals and four firms-*vide* statement placed on the Table)**

ಶ್ರೀ ಹೆಚ್. ಡಿ. ದೇವೇಗೌಡ:– ಬೆಂಗಳೂರು ನಗರದಲ್ಲಿ ನೀಡಿರುವ ಚಲನಚಿತ್ರ ಪರವಾನೆಗಳ ಬಗ್ಗೆ ಸರ್ಕಾರದವರು ಘೋಷಣೆ ಮಾಡಿದ್ದು ನಿಜವೇ? ಅದಕ್ಕೆ ಪ್ರಬಲವಾದ ಕಾರಣಗಳೇನು?

‡ಶ್ರೀ ಡಿ. ದೇವರಾಜ ಅರಸ್: ಇನ್ನುಮುಂದೆ ಸರ್ಕಾರ ಇದಕ್ಕೆ ಪರವಾನೆ ಕೊಡುವುದು ಸೂಕ್ತವಲ್ಲವೆಂದು ನಾನು ಘೋಷಣೆ ಮಾಡಿದ್ದು 15-7-1974 ರಲ್ಲಿ ಅದರ ಬಗ್ಗೆ ಸರ್ಕಾರದಿಂದ ಕಾಗದ ಡೆಪ್ಯುಟಿ ಕಮಿಷನರಿಗೆ ಹೋಗಿದ್ದು 27-7-1974ರಲ್ಲಿ. ಅದಾದಮೇಲೆ 7 ಲೈಸೆನ್ಸ್ ಕೊಟ್ಟಿದ್ದೇವೆಂದು ತಮಗೆ ಉತ್ತರ ಕೊಟ್ಟಿದ್ದೇನೆ. ಆ ರೀತಿಯಾಗಿ ಲೈಸೆನ್ಸ್ ಕೊಡಲು ಕಾರಣವಿಷ್ಟೇ. ಥಿಯೇಟರ್

**Copy placed in the Karnatak Legislative library *vide* No. 39 dated 24-3-75.

ಗಳನ್ನು ಕಟ್ಟಲು ಪರವಾನೆ ಕೊಡುವುದಕ್ಕೆ ಮುಂಚಿತವಾಗಿ ಎನ್. ಒ. ಸಿ. ಕೊಡುವುದು ಒಂದು. ಆಮೇಲೆ ಥಿಯೇಟರ್‌ಗಳನ್ನು ನಡೆಸಲು ಲೈಸೆನ್ಸ್ ಕೊಡುವುದು ಮತ್ತೊಂದು ಹಂತ. ಏಳು ಜನರಿಗೆ ಎನ್. ಒ. ಸಿ ಕೊಟ್ಟಿದೆ. ನಾನು ಆ ರೀತ್ಯಾಯಾಗಿ ಫೋಷಣೆ ಮಾಡುವುದಕ್ಕೆ ಮುಂಚಿತವಾಗಿ ಅಂದರೆ 1971-72, 1972.73, 1973_74ರಲ್ಲಿ ಕೊಟ್ಟಿದ್ದಾರೆ. ಥಿಯೇಟರ್ ಕಟ್ಟುವುದಕ್ಕೆ ಎನ್. ಒ ಸಿ. ಕೊಟ್ಟಿರುವುದರಿಂದ ಲೈಸೆನ್ಸ್ ಎಗ್ಜಿಕ್ಯೂಷನ್ ಕಾಲದಲ್ಲಿ ಅವರು ಆಗ ಕೊಟ್ಟಿರುವುದನ್ನು ಈಗ ಹೋಲ್ಡ್ ಪ್ ಮಾಡುವುದಕ್ಕಾಗುವುದಿಲ್ಲ ಮುಂದೆ ಅದನ್ನ ವಿಚಾರ ಮಾಡಬೇಕು ಈಗ ಅದನ್ನು ನಿಲ್ಲಿಸುವುದು ಕಾನೂನು ಪ್ರಕಾರ ಸರಿಯಿಲ್ಲವೆಂದು ಕೊಟ್ಟಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ:—ಬೆಂಗಳೂರು ಸಿಟಿ ಕಾರ್ಪೊರೇಷನ್ ಏರಿಯಾದಲ್ಲಿ ಸಿನೆಮಾ ಥಿಯೇಟರ್‌ಗಳಿಗೆ ಲೈಸೆನ್ಸ್ ಕೊಡಲಾರದೆಂದು ತಾವು ಘೋಷಣೆ ಮಾಡಿದ ಆಮೇಲೆ ಲೈಸೆನ್ಸ್ ಕೊಟ್ಟಿದ್ದೀರಿ ಅದಕ್ಕೆ ಪ್ರಬಲವಾದ ಕಾರಣವೇನು ?

1-30 P. M.

ಶ್ರೀ ಡಿ. ದೇವರಾಜ ಅರಸ್ :— ಸರ್ಕಾರ ಘೋಷಣೆ ಮಾಡಿದ್ದು 15-7-1974ಲ್ಲಿ. ಅದನ್ನು ಸರ್ಕಾರದಿಂದ ಡೆಪ್ಯುಟಿ ಕಮಿಷನರ್‌ಗೆ 27_7_1974ರಲ್ಲಿ ಕಳುಹಿಸಿಕೊಟ್ಟಿವೆ ಆದರೂ ಇದು ಆದ ಮೇಲೆ ಲೈಸೆನ್ಸ್ ಕೊಟ್ಟಿದ್ದಿವೆಂದು ಹೇಳಿದ್ದೇನೆ ಕೊಡುವುದಕ್ಕೆ ಕಾರಣವಾದರೂ ಇಷ್ಟೆ ಥಿಯೇಟರ್ಸ್ ಕಟ್ಟಿಸುವುದಕ್ಕೆ ಮುಂಚೆ ಎರಡು ಹಂತಗಳು ಇವೆ. ಅದರಲ್ಲಿ ಒಂದು ಎನ್. ಓ ಸಿ ಒಂದು ಹಂತ ಅದು ಕಟ್ಟಿಸುವುದಕ್ಕೆ ಮಾತ್ರ. ಕಟ್ಟಿ ಆದಮೇಲೆ ನೋ ಎಕ್ಷಬಿಟ್ಸ್ ಮಾಡುವುದಕ್ಕೆ ಲೈಸೆನ್ಸ್ ಬೇಕಾಗುತ್ತದೆ. ಅದಕ್ಕೆ ಲೈಸೆನ್ಸ್ ಕೊಡಬಹುದು ಎರಡನೇ ಹಂತ. ಇದರಲ್ಲಿ 7 ಜನರಿಗೆ ಎನ್. ಓ. ಸಿ. ಹಿಂದೆಯೇ ಕೊಟ್ಟಿದ್ದಾರೆ. 1970-71, 71-72 ರಲ್ಲಿ ಕಟ್ಟುವುದಕ್ಕೆ ಎನ್. ಓ. ಸಿ. ಕೊಟ್ಟಿರುವುದರಿಂದ ಈಗ ನಿಲ್ಲಿಸುವುದು ಸರಿಹೋಗುವುದಿಲ್ಲ. ಅವುಗಳಿಗೆ ಕೊಟ್ಟಿದ್ದಾರೆ.

ಶ್ರೀ ಹೆಚ್. ಡಿ. ದೇವೆಗೌಡ : ತಾವು ಘೋಷಣೆ ಮಾಡಿದ ಮೇಲೆ ಎನ್. ಓ. ಸಿ. ಕೊಟ್ಟಿರುವುದು ನಿಜವಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್ :— ಅಪ್ಲಿಕೇಷನ್ ಮೊದಲು ಕೊಟ್ಟಿದ್ದು ಉಳಿದಿದ್ದವು ಆದ್ದರಿಂದ ಅವುಗಳಿಗೆ ಕೊಡುವುದಕ್ಕೆ ಕನ್ಸಿಡರ್ ಮಾಡಿ ಕೊಡಬಹುದು ಎಂದು ಕಾನೂನು ಕೆಲಪು ಬದಲಾವಣೆ ಆಗಿದೆ. ಇತ್ತೀಚೆಗೆ ಕಾನೂನು

(ಶ್ರೀ ಡಿ. ದೇವರಾಜ ಅರಸ್)

ತರಿಸಿಕೊಂಡು ನೋಡಿದಾಗ ಡಪ್ಯೂಟಿ ಕಮಿಷನರ್ ಮತ್ತು ಸರ್ಕಾರಕ್ಕೂ ಕರಸ್ ಪಾಂಡೆನ್ಸ್ ನಡೆದು ಈಗ ಫೈನಲ್ ಸ್ಟೇಜ್‌ಗೆ ಬಂದಿದೆ. ಈ ಮಧ್ಯ ಪ್ರೊಸೆಸ್ ಆಗಿ ಸೆವರಲ್ ಸ್ಟೇಜಸ್‌ನಲ್ಲಿ ಇದ್ದ ಕಾರಣ ಅವುಗಳಿಗೆ ಕೊಡುವುದಿಲ್ಲವೆಂದು ಹೇಳಿದರೆ ಸರಿಹೋಗುವುದಿಲ್ಲವೆಂದು ಮುಂಚೆ ಕಾನೂನು ಒದಲಾವಣೆ ಮಾಡ ಬೇಕೆಂದು ಹೇಳಿದ್ದೇನೆ

ಶ್ರೀ ಹೆಚ್. ಡಿ. ದೇವೇಗೌಡ :—ಇತ್ತೀಚೆಗೆ ಎನ್. ಓ. ಸಿ. ಕೊಟ್ಟಿದ್ದೀರಲ್ಲಾ ಅವುಗಳು ಯಾವುವು ಇದರಲ್ಲಿ ಇಂಡಿವಿಜಯಲ್ ಯಾವುದು ಮತ್ತು ಫರ್ಮ್ಸ್ ಯಾವುವು ಎಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ಶ್ರೀ ಟಿ ಎ. ಶಿವಸ್ವಾಮಿ, 22-1-1974 ರಲ್ಲಿ ನಾನು ಹೇಳಿವುದಕ್ಕೆ ಮುಂಚೆ ಕೊಟ್ಟಿದ್ದು. ಶ್ರೀ ಎಸ್. ಆರ್. ಶ್ರೀನಿವಾಸನ್ 12-7-1974 ಅಪ್ಲಿಕೇಷನ್ 5-11-1975 ಶ್ರೀ ಜನವರಾಜ್ 5-4-1974 ಅರ್ಜಿ ಕೊಟ್ಟಿದ್ದು ಇದು ಮಿನಿ ಥಿಯೇಟರ್. ಶ್ರೀ ಜಿ. ಪುರುಷೋತ್ತಮದಾಸ್ 17-2-1974 ರಲ್ಲಿ 24-4-1974ರಲ್ಲಿ ಎನ್. ಓ ಸಿ. ಕೊಟ್ಟಿದ್ದಾರೆ ಶ್ರೀ ಕೆ ಆರ್. ಜಂಬಕೇಶವ 27-8-1973ರಲ್ಲಿ ಅಪ್ಲಿಕೇಷನ್ ಕೊಟ್ಟಿದ್ದು ಎನ್. ಓ. ಸಿ. ಕೊಟ್ಟಿದ್ದು 20-9-1974 ರಲ್ಲಿ ಈ ಮಧ್ಯೆ ಶ್ರೀ ಕೃಪಾಣ್ಣರೆಡ್ಡಿ 27-7-1974 5-7-1974 ಶ್ರೀ ಅಶೋಕ ಕ. ಸಿಂದ್ಯೆ 13-7-1973-20-7-1974 ಆಮೇಲೆ ತಲ್ಲಮ್ ಎಂ. ನಂಜುಂಡಯ್ಯ ಶೆಟ್ಟಿ 3-5-1973 17-8-1974 ಗೋವಿಂದರಾಜುಲು ಶೆಟ್ಟಿ 9-3-1974 ಶ್ರೀ ವಿ ಎನ್. ಗೌಡ 25-3-1974 20-10-1974 ಶ್ರೀ ಬಿ. ಸಿ. ಶ್ರೀನಿವಾಸ್ 30-12-1974-21-7-1974.

MADAM SPEAKER :—Now question hour over

QUESTIONS FOR ANSWERS FOR THE DAY BUT NOT TAKEN UP.

* ACQUISITION OF LAND FOR ROAD IN GONIBEEDU OF MUDIGERE TALUK.

85. SRI G. PUTTASWAMY (Mudigere).— Will the Minister for Revenue be pleased to state :—